ಶ್ರೀ ಡಿ. ದೇವರಾಜ ಅರಸ್ —೨,೫ ಲಕ್ಷ ಕೆ. ಜಿ. ಉಪಯೋಗ ಮಾಡಿಕೊಳ್ಳುತ್ತಾರೆ.

ಶ್ರೀ ಎಸ್. ಕರಿಯಪ್ಪ.—ಹೋದ ವರ್ಷ ರಾ—ಸಿಲ್ಕ್‌ನ್ನು ಯಾರು ಯಾರಿಂ ಕೊಂಡು ಕೊಂಡರು ಎಂಬುದನ್ನು ಹೇಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್ —ವೇಸ್ಟ್ ಸಿಲ್ಕನ್ನು ರಫ್ತು ಮಾಡಲು ಕೆಲವರಿಗೆ ಅನುಮತಿ ಕೊಡ ಲಾಗುತ್ತದೆ. ಅವರು ಖಾಸಗೀ ಜನರ ಹತ್ತಿರ ಮತ್ತು ಸರ್ಕಾರದ ಡೀಲರ್ಸ್ ಹತ್ತಿರ ಕೊಂಡುಕೊಂಡು ಹೊರಗಡೆಗೆ ಕಳಿಸುತ್ತಾರೆ.

ಶ್ರೀ ಎಸ್. ಕರಿಯಪ್ಪ.—ಹೋದವರ್ಷ ಯಾರು ಯಾರಿಗೆ ರಫ್ತು ಮಾಡಲು ಅನುಮತಿ ಕೊಟ್ಟಿದ್ದಿರಿ ಮತ್ತು ಅವರ ಪೈಕಿ ಯಾರು ಯಾರು ರಫ್ತು ಮಾಡಿದ್ದಾರೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅನೇಕ ಜನರಿಗೆ ಅನುಮತಿ ಕೊಟ್ಟಿದ್ದೇವೆ. ಯಾರು ಯಾರಿಗೆ ಕೊಟ್ಟಿದ್ದೇವೆ ಎಂಬ ಬಗ್ಗೆ ಜೇರೆ ನೋಟೀಸ್ ಕೊಟ್ಟರೆ ಹೇಳುತ್ತೇನೆ.

ಶ್ರೀ ಎಸ್. ಕರಿಯಪ್ಪ.—ವೇಸ್ಟ್ ಸಿಲ್ಕನ್ನು ಖಾಸಗೀಯವರಿಗೆ ಕೊಡುವುದಕ್ಕೆ ಮುಂಚೆ ಅದನ್ನು ಕೊಂಡುಕೊಳ್ಳಬಹುದು ಎಂದು ಪಬ್ಲಿಸಿಟಿ ಕೊಡುತ್ತಿದ್ದೀರಾ ?

ಶ್ರೀ ಡಿ. ದೇವರಾಜ ಅರಸ್.—ವೇಸ್ಟ್ ಸಿಲ್ಕ್ ಸಾಮಿರಾರು ಜನರ ಹತ್ತಿರ ಇರುತ್ತದೆ. ಅದನ್ನು ಯಾರು ಬೇಕಾದರೂ ಕೊಂಡುಕೊಳ್ಳುವುದಕ್ಕೆ ಅವಕಾಶವಿದೆ. ಅದಕ್ಕೆ ನಿರ್ಬಂಧವೇನೂ ಇಲ್ಲ ಆದರೆ ಚೆನ್ನಪಟ್ಟಣ ಸ್ಪನ್ ಸಿಲ್ಕ್ ಕಾರ್ಖಾನೆಯವರು ಹೊರದೇಶಕ್ಕೆ ವರ್ಷೇ ವರ್ಷೇ ಕಳಿಸುವ ವಂಗ್ನ ಕೇಂದ್ರ ಸರ್ಕಾರದವರು ಮತ್ತು ನಮ್ಮ ಸೆಂಟ್ರಿಲ್ ಸಿಲ್ಕ್ ಬೋರ್ಡಿನವರು ಸೇರಿಕೊಂಡು ಒಂದು ಭಾಗವನ್ನು ತಮಗೆ ಕೊಡಬೇಕೆಂದು ಕೇಳುತ್ತಾರೆ. ಅದರಂತೆ ಅವರು ಕೊಟ್ಟು ಬಾಕಿಯದನ್ನು ಅವರು ಎಲ್ಲಿ ಜೇಕಾದರೂ ಮಾರಬಹುದು.

ಶ್ರೀ ಎಸ್. ಕರಿಯಪ್ಪ.—ವೇಸ್ಟ್ ಸಿಲ್ಕ್‌ನ್ನು ಕೊಡುವ ಹಂದರ್ಭದಲ್ಲಿ ಟೆಂಡರ್ ಕರೆಯುವ ಪದ್ಧತಿ ಏನಾದರೂ ಇದೆಯೇ ?

ಶ್ರೀ ಡಿ. ದೇವರಾಜ ಅರಸ್.—ನಮ್ಮ ಹತ್ತಿರ ವೇಸ್ಟ್ ಸಿಲ್ಕ್ ಇಲ್ಲ ; ಆದಕಾರಣ ನಾವು ಅದನ್ನು ಯಾರಿಗೂ ಕೊಡುವುದಕ್ಕೆ ಹೋಗುವುದಿಲ್ಲ. ಅದು ಖಾಸಗೀ ವ್ಯಾಪಾರಸ್ಥರ ಹತ್ತಿರ ಇರುತ್ತದೆ ರಫ್ತು ಮಾಡುವವರು ಅವರ ಹತ್ತಿರ ಕೊಂಡುಕೊಳ್ಳುತ್ತಾರೆ.

## CLAIMS OF SHANKARANARAYANA CONSTRUCTION COMPANY

473 SRI H. D. DEVE GOWDA (Holenarasipura).—Will the Chief Minister be pleased to state.—

(*a*) the claims made by the Shankaranarayana Co. struction Company in respect of Malaprabha Project and the date of preferment of the claim ;

(*b*) the claims accepted and the claims rejected ;

(*c*) the financial involvement in the claims accepted ;

(*d*) whether the report of the Chief Engineer concerned regarding the claim has been accepted ; if not, the reasons for the same ;

(*e*) whether the relative tender Notification and agreement of the Contractors in respect of all the works included in the claim would be laid on the Table of the House ?

SRI D. DEVARAJ URS (Chief Minister).—

(*a*) Claims made are .

(i) Payment of Current Schedule of Rates for the work done beyond the c ntract pe iod ;

(ii) Additional Rate for excavation of foundation in hard rock ;

(iii) Removal of silt in two extra seasons ;

(iv) Revision of rate for pier concrete ;

(v) Extra lead charges for bringi g face stones ; Date of preferment of claim is 19-8-19 2.

(*b*) Claims No. (i) and (v) are accepted. Claims (ii), (iii) and (iv) are rejected.

(*c*) Rs. 0.83 lakhs (approximate) in respect of claim (v) and Rs. 5.54 lakhs (approximate) in respect of clalm (i .

(*d*) Report of the Chief Engineer has been considered by the Technical Sub-Committee.

(*e*) Yes. (Copy placed on the Table of the Houes) *

ಶ್ರೀ ಎಚ್. ಡಿ. ದೇವೇಗೌಡ,—ನನ್ನ (ಇ) ಪ್ರಶ್ನೆಗೆ ಉತ್ತರ ಕೊಡುತ್ತಾ ಹೀನೇ ಬೇಡಿಕೆಯ ಬಗ್ಗೆ ಸುಮಾರು ೦.೮೩ ಲಕ್ಷ ರೂಪಾಯಿಗಳು ಮತ್ತು ೧ನೇ ಬೇಡಿಕೆಯ ಬಗ್ಗೆ ಸುಮಾರು ೫.೫೪ ಲಕ್ಷ ರೂಪಾಯಿಗಳು ಎಂದು ಹೇಳಿದ್ದೀರಿ. ಮತ್ತು ಕಂಟ್ರಾಕ್ಟ್ ಅವಧಿಯ ನಂತರ ನಿರ್ವಹಿಸಿದ ಕಾಮಗಾರಿಗಳ ಬಗ್ಗೆ ಈಗಿನ ದರಗಳ ಪಟ್ಟಿಯ ಮೇರೆಗೆ ಪಾವತಿ ಮಾಡುವ ಬಗ್ಗೆ ೫.೫೪ ಲಕ್ಷ ರೂಪಾಯಿಗಳು ಎಂದು ಹೇಳಿದ್ದೀರಿ. ಅಂದರೆ ಇದು ಟೆಂಡರ್ ಕ್ವಾಂಟಿಟಿಗೆ ಸಮನಾಗಿದೆಯೋ ಅಥವಾ ಜಾಸ್ತಿಯಾಗಿದೆಯೋ ?

† ಶ್ರೀ ದೇವರಾಜ ಅರಸ್.—ಸ್ವಲ್ಪ ಭಾಗ ಟೆಂಡರ್ ಕ್ವಾಂಟಿಟಿಯಲ್ಲಿದೆ ಸ್ವಲ್ಪ ಭಾಗ ಜಾಸ್ತಿಯಿದೆ.

ಶ್ರೀ ಎಚ್. ಡಿ. ದೇವೇಗೌಡ.— ಸ್ವಲ್ಪ ಅದನ್ನು ವಿಭಾಗ ಮಾಡಿ ಹೇಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್,—ಆ ವಿವರ ಈಗ ನನ್ನ ಹತ್ತಿರ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಟೆಂಡರ್ ಕ್ವಾಂಟಿಟಿಗಿಂತ ಜಾಸ್ತಿ ರೇಟನ್ನು ಕೊಡುವುದಕ್ಕೆ ಏನು ಕಾರಣವಿತ್ತು ?

SRI D. DEVARAJ URS.—It was beyond his control. There were reasons f.r this. For the work while he executed beyond the period he is not respo si ble Therefore some of the claims have been accepted.

SRI H. D. DEVA GOWDA.—May I know the reasons ?

SRI D. DEVARAJ URS.—The very important reason for this is, excavati n has taken place for foundation He could not complete the masonry wo.k because of technical trouble.

ಶ್ರೀ ಎಚ್. ಡಿ. ದೇವೇಗೌಡ,—ಇಲ್ಲಿ ದೊಡ್ಡ ಕಲ್ಲುಗಳನ್ನು ತರುವುದಕ್ಕಾಗಿ ಹೆಚ್ಚಿನ ಮಾರ್ಗದ ದರಗಳನ್ನು ನಿಂಡಲಾಯಿತು ಎಂದು ಹೇಳಿದ್ದೀರಿ. ಟೆಂಡರ್ ಅಗ್ರಿಮೆಂಟ್‌ನಲ್ಲಿಯೇ ಇದನ್ನು ಸೇರಿಸಿರ ಆಲ್ಲವೇ ? ಸೇರಿಸಿದ್ದರೆ ಹೆಚ್ಚಿನ ಮಾರ್ಗದ ದರಗಳನ್ನು ಕೊಡಲು ಕಾರಣವೇನು ?

---

* Copy Placed in the Karnataka legislature library vide No. 50 Dated 6th May 1974.

ಶ್ರೀ ಡಿ. ದೇವರಾಜ ಅರಸ್.— ಆಪ್ರೂವ್ಡ್ ಕ್ವಾರಿಯಲ್ಲಿ ಕಲ್ಲು ಸಿಕ್ಕದೆ ಇನ್ನೊಂದರ ಕಡೆಯಿಂದ ತೆಗೆದುಕೊಂಡು ಬಂದಿದ್ದರಿಂದ ಹೆಚ್ಚು ಹಣ ಕೊಡಬೇಕಾಯಿತು.

ಶ್ರೀ ಎಚ್. ಡಿ. ದೇವೇಗೌಡ.— ಆಪ್ರೂವ್ ಕ್ವಾರಿಯಲ್ಲಿ ಮೆಟೀರಿಯಲ್ ಸಿಕ್ಕಲಿಲ್ಲ ಎಷ್ಟು ಶಕ್ಯಂಥಾದ್ದಕ್ಕೆ Is there any report to that effect by the departmental officers ?

SRI D. DEVARAJ URS.—Yes.

## PRIMARY AND SECONDARY SCHOOL BUILDINGS OF YELBURGA TALUK

715. SRI PRABHURAJ PATIL (Yelburga).—Will the Minister of State for Primary and Secondary Education be pleased to state.—

(*a*) the number of primary and secondary schools in Yelburga Taluk of Raichur District ;

(*b*) the number of schools which have been provided with buildings and out of them the number of buildings which are incomplete;

(*c*) the steps taken by Government to provide buildings for the remaining schools :

(*d*) whether the Government intends to complete the incomplete buildings early ; if so, wit in what period ?

SMT. E. E. VAZ.—(Minister of State for Primary and Secondary Education).—

| | *Primary Schools* | *Secondary Schools* | *Total* |
|---|---|---|---|
| (*a*) | 90 | 45 | 135 |
| (*b*) | | 78 | |
| | | 8 | |

(*c*) Such buildings are constructed where the members of School Development Committee and the public come forward to pay their share of contribution which is required to be paid.

(*b*) The Taluk Development Board and P. W. D. have been instructed to complete the construction of buildings as early as possible.

ಶ್ರೀ ಪ್ರಭುರಾಜ್ ಪಾಟೀಲ್.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ೮ ಶಾಲೆಗಳ ಕಟ್ಟಡಗಳು ಅರ್ಧಂಬರ್ಧ ಆಗಿವೆ ಎಂದು ಹೇಳಿದ್ದೀರಿ, ಆ ಕಟ್ಟಡಗಳ ಹೆಸರು ಯಾವುವು ಎಂಬುದನ್ನು ಹೇಳುತ್ತೀರಾ ?

† ಶ್ರೀಮತಿ ಇ. ಇ ವಾಜ್.—ಈಗಾಗಲೇ ೭೮ ಶಾಲೆಗಳ ಕಟ್ಟಡವನ್ನು ಪೂರೈಸಿದ್ದೇವೆ. ಇನ್ನು ಉಳಿದ ೮ ಶಾಲೆಗಳ ಕಟ್ಟಡಗಳನ್ನು ಈಗ ಕಟ್ಟಿಸ್ತಿದ್ದೇವೆ. ಆ ಶಾಲೆಗಳು ಯಾವುವು ಎಂದರೆ ಬಾನಾಪುರ, ಕನ್ನಸಂದ್ರ, ಬಿಕ್ಕಮ್ಮೈನೇರಾ, ಮಂರುಡಿ, ಬೇವೂರು, ವನಕೋಲ ಕೆಂಟಿ ಮಾಟವೇಡಿನ್ನಿ, ಕಾಳ್ಕರೆ.

ಶ್ರೀ ಪ್ರಭೂರಾಜ್ ಪಾಟೀಲ್.—ಎಷ್ಟು ದಿವಸಗಳಲ್ಲಿ ಆ ಶಾಲಾಕಟ್ಟಡಗಳನ್ನು ಪೂರೈಸುತ್ತೀರಿ ?